# ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು(ಆಡಳಿತ)ರವರ ಕಛೇರಿ, ಕಲಬುರಗಿ

ಸಂಖ್ಯೆ : ಅ2/ಆಡಳಿತ/ಪ್ರಾಶಾಶಿ/ಪ್ರೌಶಾಶಿ/ಬಡ್ತಿ/ಗ್ರೇಡ್-2/70/2019-20 ದಿನಾಂಕ: 31-08-2020

## ಅಧಿಸೂಚನೆ

ವಿಷಯ :- ಕಲಬುರಗಿ ಜಿಲ್ಲೆಯಲ್ಲಿ ತರಬೇತಿ ಹೊಂದಿದ ಪದವಿಧರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಇವರಿಗೆ ಪ್ರೌಢ ಶಾಲಾ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗೆ ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಲು ಬ್ಲಾಕ್‌ವಾರು ತಾತ್ಕಾಲಿಕ ಕೌನ್ಸಲಿಂಗ್ ಆದ್ಯತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ :-
1. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 13-07-2020
2. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 13-08-2020
3. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 28-08-2020
4. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 29-08-2020

ಕಲಬುರಗಿ ಜಿಲ್ಲೆಯಲ್ಲಿ ತರಬೇತಿ ಹೊಂದಿದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಜೇಷ್ಠತಾ ಪಟ್ಟಿಯನ್ನು ಈಗಾಗಲೇ ದಿನಾಂಕ: 15-06-2020 ರಂದು ಸಂಬಂಧಿಸಿದ ಶಿಕ್ಷಕರ ಮೂಲ ಸೇವಾ ಪುಸ್ತಕ ಹಾಗೂ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ಮೂಲ ದಾಖಲೆಗಳ ಪರಿಶೀಲನೆಯ ಷರತ್ತಿಗೆ ಒಳಪಟ್ಟು ಪ್ರಕಟಿಸಲಾಗಿದೆ.

2012 ಬ್ಲಾಕ್ ಅವಧಿಯಿಂದ 2019ನೇ ಬ್ಲಾಕ್ ಅವಧಿಯ ವರೆಗೆ ಆಯಾ ಬ್ಲಾಕ್ ಅವಧಿಗಳಲ್ಲಿ ಪ್ರಕಟಿಸಲಾದ ಜೇಷ್ಠತಾ ಪಟ್ಟಿಗಳಲ್ಲಿ ಸ್ಥಾನ ಪಡೆದುಕೊಂಡಿರುವ ಶಿಕ್ಷಕರುಗಳಿಗೆ ಆಯಾ ಬ್ಲಾಕ್ ಅವಧಿಯಲ್ಲಿ ಉದ್ಭವಿಸಿದ ಹುದ್ದೆಗಳ ಪೈಕಿ ಬಡ್ತಿಗಾಗಿ ನಿಗದಿಪಡಿಸಲಾದ ಅನುಪಾತದಂತೆ ಹಾಗೂ ಪ್ರಚಲಿತ ಮೀಸಲಾತಿ ರೋಸ್ಟರ್ ಬಿಂದುಗಳಂತೆ ಗುರುತಿಸಿ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು 1 : 2 ಅನುಪಾತದಲ್ಲಿ ಸಿದ್ಧಪಡಿಸಿ ಉಲ್ಲೇಖ (01) ರ ಅಧಿಸೂಚನೆಯ ಮೂಲಕ ಪ್ರಕಟಿಸಲಾಗಿತು. ಸಂಬಂಧಿಸಿದ ಶಿಕ್ಷಕರ ಮೂಲ ಸೇವಾ ಪುಸ್ತಕ ಹಾಗೂ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆಯನ್ನು ನಡೆಸಿ ಸದರಿ ಶಿಕ್ಷಕರುಗಳ ಪೈಕಿ ಬಡ್ತಿಯನ್ನು ನಿರಾಕರಿಸಿದ ಶಿಕ್ಷಕರ ಬದಲಾಗಿ, ಜೇಷ್ಠತಾ ಪಟ್ಟಿಯಲ್ಲಿ ಇವರುಗಳ ಕೆಳಗೆ ಸ್ಥಾನ ಪಡೆದುಕೊಂಡಿರುವ ಶಿಕ್ಷಕರ ಮೂಲ ಸೇವಾ ಪುಸ್ತಕ ಹಾಗೂ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದ ನಂತರ ಉಲ್ಲೇಖ (02) ರನ್ವಯ 1 : 1 ಅನುಪಾತದ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಪ್ರಕಟಿಸಿ ಸಂಬಂಧಿಸಿದ ಶಿಕ್ಷಕರಿಗೆ ಈ ಕುರಿತು ಏನಾದರು ಆಕ್ಷೇಪಣೆಗಳು ಇದ್ದಲ್ಲಿ ದಿನಾಂಕ: 20-08-2020 ರವರೆಗೆ ಖುದ್ದಾಗಿ ಈ ಕಛೇರಿಗೆ ಹಾಜರಾಗಿ ಆಕ್ಷೇಪಣೆಗಳನ್ನು ಪೂರಕ ದಾಖಲೆಗಳೊಂದಿಗೆ ಸಲ್ಲಿಸಲು ಕಾಲಾವಕಾಶವನ್ನು ನೀಡಲಾಗಿತ್ತು.

ಅದರಂತೆ ಸದರಿ 1 : 1 ಅನುಪಾತದ ತಾತ್ಕಾಲಿಕ ಅರ್ಹತಾ ಪಟ್ಟಿಗೆ ಸಲ್ಲಿಸಲಾಗಿರುವ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಹಾಗೂ ಸದರಿ ಪಟ್ಟಿಯಲ್ಲಿ ಹೊಸದಾಗಿ ಸ್ಥಾನ ಪಡೆದುಕೊಂಡಿರುವ ಶಿಕ್ಷಕರ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲಿಸಿದ ನಂತರ ಮತ್ತು ಇವರುಗಳಲ್ಲಿ ಬಡ್ತಿಯನ್ನು ನಿರಾಕರಿಸಿದ ಶಿಕ್ಷಕರ ಸ್ಥಾನದಲ್ಲಿ ಆಯಾ ಬ್ಲಾಕ್ ಅವಧಿಯ ಜೇಷ್ಠತಾ ಪಟ್ಟಿಯಲ್ಲಿ ಅವರ ಕೆಳಗೆ ಸ್ಥಾನ ಪಡೆದುಕೊಂಡಿರುವ ಶಿಕ್ಷಕರನ್ನು ಬಡ್ತಿಗಾಗಿ ಪರಿಗಣಿಸಿ ಉಲ್ಲೇಖ (04) ರನ್ವಯ ಬ್ಲಾಕ್‌ವಾರು ತಾತ್ಕಾಲಿಕ ಅಂತಿಮ ಅರ್ಹತಾ ಪಟ್ಟಿಗಳನ್ನು **ಅನುಬಂಧ 1 ರಿಂದ ಅನುಬಂಧ -8** ರವರೆಗೆ ಕಛೇರಿಯ ವೆಬ್‌ಸೈಟದಲ್ಲಿ ಪ್ರಕಟಿಸಲಾಗಿದೆ.

ಸದರಿ ತಾತ್ಕಾಲಿಕ ಅಂತಿಮ ಅರ್ಹತಾ ಪಟ್ಟಿಗಳಲ್ಲಿ ಸ್ಥಾನ ಪಡೆದುಕೊಂಡಿರುವ ಅರ್ಹ ಶಿಕ್ಷಕರಿಗೆ ಜಿಲ್ಲೆಯ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಆಯಾ ವಿಷಯ ಹಾಗೂ ಮಾಧ್ಯಮದ ಹುದ್ದೆಯಲ್ಲಿ ಬಡ್ತಿ ಮೂಲಕ ಸ್ಥಳ ನಿಯುಕ್ತಿಗೊಳಿಸಲು ಬ್ಲಾಕ್‌ವಾರು, ವಿಷಯವಾರು ಹಾಗೂ ಮಾಧ್ಯಮವಾರು ತಾತ್ಕಾಲಿಕ ಕೌನ್ಸಲಿಂಗ್ ಆದ್ಯತಾ ಪಟ್ಟಿಯನ್ನು ಈ ಮೂಲಕ ಪ್ರಕಟಿಸಲಾಗಿದೆ.

ಸಂಬಂಧಿಸಿದ ಶಿಕ್ಷಕರು ಸದರಿ ತಾತ್ಕಾಲಿಕ ಕೌನ್ಸಲಿಂಗ್ ಆದ್ಯತಾ ಪಟ್ಟಿಗಳನ್ನು ಗಮನಿಸಿ ಸದರಿ ಪಟ್ಟಿಗಳ ಕುರಿತು ಏನಾದರು ಆಕ್ಷೇಪಣೆಗಳು ಇದ್ದಲ್ಲಿ ದಿನಾಂಕ: 02-09-2020 ರವರೆಗೆ ಕಛೇರಿಯ ಅವಧಿಯ ಒಳಗೆ ಖುದ್ದಾಗಿ ಈ ಕಛೇರಿಗೆ ಹಾಜರಾಗಿ ಪೂರಕ ದಾಖಲೆಗಳೊಂದಿಗೆ ಆಕ್ಷೇಪಣೆಯನ್ನು ಸಲ್ಲಿಸಬಹುದು. ತದನಂತರ ಸಲ್ಲಿಸಲಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವದಿಲ್ಲ.

ಆಯಾ ಬ್ಲಾಕಿನಲ್ಲಿ ಅರ್ಹತೆ ಹೊಂದಿರುವ ಶಿಕ್ಷಕರುಗಳಲ್ಲಿ ಅಂಗವಿಕಲ ಶಿಕ್ಷಕರುಗಳು ಇದ್ದಲ್ಲಿ ಅವರುಗಳಿಗೆ ಕೌನ್ಸಲಿಂಗದಲ್ಲಿ ಆದ್ಯತೆ ನೀಡಿ ಸಾಮಾನ್ಯ ಶಿಕ್ಷಕರಿಗೆ ಜೇಷ್ಠತೆ ಆಧಾರದ ಮೇರೆಗೆ ಕೌನ್ಸಲಿಂಗ ಆದ್ಯತೆಯನ್ನು ನೀಡಲಾಗಿದೆ.

ಸ್ಥಳ ನಿಯುಕ್ತಿಗಾಗಿ ದಿನಾಂಕ: 03-09-2020 ರಂದು ಬೆಳಿಗ್ಗೆ 11-00 ಗಂಟೆಯಿಂದ ಈ ಕಛೇರಿಯಲ್ಲಿ ಕೌನ್ಸಲಿಂಗ್ ನಡೆಸಲಾಗುವುದು. ಸಂಬಂಧಿಸಿದ ಶಿಕ್ಷಕರು ಕೌನ್ಸಲಿಂಗಗೆ ಹಾಜರಾಗುವ ಸಮಯದಲ್ಲಿ ತಮ್ಮ ಎಲ್ಲಾ ಮೂಲ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು.

31/8/2020
ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಕಲಬುರಗಿ

ಪ್ರತಿಯನ್ನು :-

1. ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಕಛೇರಿಯ ವೆಬ್ ಸೈಟ ದಲ್ಲಿ ಪ್ರಕಟಣೆಗಾಗಿ